ಇಂದಿನ ಹೊಸಪೇಟೆ ಸುಮಾರು 600 ವರ್ಷಗಳ ಹಿಂದೆ ರಚನೆಯಾದಾಗ ಅದರ ಹೆಸರು ‘ಹೊಸಪಟ್ಟಣ’. ಶ್ರೀಕೃಷ್ಣದೇವರಾಯ ಕಟ್ಟಿದ ಹೆಗ್ಗಳಿಕೆಯ ಪಟ್ಟಣವದು. ತನ್ನ ಪ್ರಜೆಗಳು ಹಾಗೂ ಮಡದಿ, ಮಕ್ಕಳ ನೆನಪಿಗಾಗಿ ಪಟ್ಟಣದ ಒಳಹೊರಗೆ ರಾಯ ಕೆರೆಗಳನ್ನು ನಿರ್ಮಿಸಿದ, ಅಣೆಕಟ್ಟು ಹಾಕಿದ, ಕಾಲುವೆ ತೋಡಿಸಿದ, ಉದ್ಯಾನವನ ಬೆಳೆಸಿದ, ದೇವಾಲಯ ಕಟ್ಟಿದ. ಅವೆಲ್ಲವೂ ನಗರದ ಹೆಗ್ಗುರುತುಗಳಾಗಿ ಈಗಲೂ ಇರಬೇಕಿತ್ತು. ಆದರೆ, ಈಗ ರಾಯನ ರಚನೆಗಳನ್ನು ಹೇಗೆ ಉಳಿಸಿಕೊಂಡಿದ್ದೇವೆ? ರಾಜ್ಯದ ಹೊಸ ಜಿಲ್ಲೆಯಾಗಿ ಕಂಗೊಳಿಸುತ್ತಿರುವ ಹೊಸಪೇಟೆಯ ಇತಿಹಾಸದ ಓಣಿಗಳಿಗೆ ‘ಸುಧಾ’ ಓದುಗರಿಗೆ ಸ್ವಾಗತ.



**ಚಿತ್ರಪಟ ಕಥನ**

# ರಾಯ ಕಟ್ಟಿದ ಹೊಸಪೇಟೆಯಲ್ಲಿ ಕೃಷ್ಣನ ನೆನಪಿನ ಹೆಗ್ಗುರುತುಗಳೆಲ್ಲಿ?

## ಇಂದಿನ ಹೊಸಪೇಟೆಯಲ್ಲಿ ಅಂದಿನ ಕೃಷ್ಣದೇವರಾಯನ ರಚನೆಗಳು, ಹೆಗ್ಗುರುತುಗಳ ಹುಡುಕಾಟ

■ ಮಲ್ಲಿಕಾರ್ಜುನ ಹೊಸಪಾಳ್ಯ

